**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿ.ಸಿ.137/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಹದೇವ | ಚಾ ಸಾ -11 |
| ತಂದೆಯ ಹೆಸರು | - | ಸಿದ್ದಪ್ಪ | ಫ್ರಾ ಸಾ -3 |
| ವಯಸ್ಸು | - | 52 ವರ್ಷ | |
| ಉದ್ಯೋಗ | - | ಚಾಲಕ | |
| ವಾಸ ಸ್ಥಳ | - | ಮೈಸೂರು | |

ದಿನಾಂಕಃ 11.12.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ನಾನು ಖಾಸಗೀ ಬಸ್ಸಿನ ಚಾಲಕನಾಗಿರುತ್ತೇನೆ. 4 ವರ್ಷಗಳ ಹಿಂದೆ ನಮ್ಮ ಬಸ್ಸನ್ನು ರಸ್ತೆಯ ಎಡ ಬದಿಯಲ್ಲಿ ನಿಲ್ಲಿಸಿದ್ದಾಗ ಒಂದು ಕೆ ಎಸ್ ಆರ್ ಟಿ ಸಿ ಬಸ್ಸು ವೇಗವಾಗಿ ಬಂದು ನಮ್ಮ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿ ಮಾಡಿರುತ್ತದೆ. ಅಪಘಾತದಿಂದ ನಮ್ಮ ಬಸ್ಸಿನಲ್ಲಿದ್ದ ಜನರಿಗೆ ಪೆಟ್ಟಾಗಿರುತ್ತದೆ. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಈಗ ನೋಡುತ್ತಿರುವ ಸಹಿ ನನ್ನದೇ. ಸ್ದಳ ಮಹಜರ್ ನಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-3 ರಲ್ಲಿ ನಮೂದಾಗಿರುವ ವಿಚಾರಗಳು ಗೊತ್ತು. ಪೊಲೀಸರು ನನ್ನ ಬಸ್ಸನ್ನು ಮತ್ತು ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಿಪಿ-3 ಕ್ಕೆ ಸತೀಶ ಎನ್ನುವವರು ಸಹಿ ಮಾಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ**

ದಿ.12.09.2018 ರಂದು ಅಪಘಾತವಾಗಿರುತ್ತದೆ ಎಂದರೆ ಸರಿ. ಸದರಿ ದಿನ ನಮ್ಮ ಬಸ್ಸು ವಾಪಸ್ಸು ಮೈಸೂರಿಗೆ ಬರುತ್ತಿತ್ತು ಎಂದರೆ ಸರಿ. ನಾನು ಪ್ರಯಾಣಿಕರನ್ನು ಹತ್ತಿಸಿಕೊಂಡು ಬಸ್ಸನ್ನು ಚಾಲನೆ ಮಾಡುತ್ತಿದ್ದಾಗ ಹಿಂದಿನಿಂದ ಕೆಎ-09-ಎಫ್-5180 ಕೆ ಎಸ್ ಅರ್ ಟಿ ಸಿ ಬಸ್ಸು ಅತಿ ವೇಗ ಮತ್ತು ಅಜಾಗರೂಕತೆಯಿಂದ ಬಂದು ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿ, ಆದರೆ ನನ್ನ ಬಸ್ಸಿನ ಗೇರ್ ಬಾಕ್ಸ್ ಹೋಗಿದ್ದ ಕಾರಣ ಪಕ್ಕದಲ್ಲಿ ನಿಲ್ಲಿಸಿದ್ದೇನು. ಕೆಎ-51-3333 ಖಾಸಗೀ ಬಸ್ಸನ್ನು ನಾನು ಚಾಲನೆ ಮಾಡುತ್ತಿದ್ದೇನು ಎಂದರೆ ಸರಿ. ಕೆ ಎಸ್ ಅರ್ ಟಿ ಸಿ ಬಸ್ಸಿನ ಮುಂಭಾಗ ಜಖಂ ಅಗಿರುತ್ತದೆ ಎಂದರೆ ಸರಿ. ಕೆ ಎಸ್ ಅರ್ ಟಿ ಸಿ ಬಸ್ಸಿನ ಹಿಂದೆ ಬಂದ ಕೆಎ-53-ಎಂಸಿ-9999 ಇನ್ನೊವಾ ಕಾರು, ಅಚಾನಕ್ಕಾಗಿ ಬಸ್ಸು ನಿಂತ ಕಾರಣ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿ ಅಗಿರುತ್ತದೆ ಎಂದರೆ ಸರಿಯಲ್ಲ.

ದಿ.13.09.2018 ರಂದು ಪೊಲೀಸರು ಮಹಜರು ಮಾಡಿ ಕೆ ಎಸ್ ಅರ್ ಟಿ ಸಿ ಬಸ್ಸು, ನನ್ನ ಖಾಸಗೀ ಬಸ್ಸು ಹಾಗೂ ಇನ್ನೊವಾ ಕಾರನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಕಾರಿನ ಬಗ್ಗೆ ನನಗೆ ಗೊತ್ತಿಲ್ಲ. ಮಹಜರಿಗೆ ಚಾಸಾ-14, 15 ರವರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹಜರನ್ನು ಘಟನಾ ಸ್ಥಳದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು ಗುರುತಿನ ಬಗ್ಗೆ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ಸಲ್ಲಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ಬಿ ಎಸ್ ಎಸ್ ವಕೀಲರಿಂದಃ**

ಘಟನಾ ಸ್ಥಳದ ಬಳಿ ಬಸ್ಸು ನಿಲ್ದಾಣ ಇಲ್ಲ ಎಂದರೆ ಸರಿ. ನಾನು ಸೂಚನೆ ಕೊಡದೇ ಅಚಾನಕ್ಕಾಗಿ ನನ್ನ ಬಸ್ಸನ್ನು ನಿಲ್ಲಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷತನ ಮತ್ತು ಅಜಾಗರೂಕತೆಯಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-3 ನ್ನು ಬೆಳಿಗ್ಗೆ 9.00 ಗಂಟೆಗೆ ಮಾಡಿರುತ್ತಾರೆ. ನಿಪಿ-3 ಕ್ಕೆ ಬೇರೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಮಹಜರಿಗೆ ಸಹಿಯನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ, ಅದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಆರೋಪಿ ಬಸ್ಸನ್ನು ಅತಿವೇಗದಿಂದ ಚಾಲನೆ ಮಾಡಿ

ಡಿಕ್ಕಿ ಪಡಿಸಿರುತ್ತಾರೆ ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ